

# ಫೋಟೋ.. ಅಲ್ಲ, ಚಿತ್ರ!

ಫೋಟೋಗಳನ್ನೂ ನಾಚಿಸುವಷ್ಟು ಸಹಜವಾಗಿ ಕುಂಚದಿಂದ ಚಿತ್ರ ಬಿಡಿಸಬಹುದು ಎನ್ನುವುದು ಈ ಕಲಾವಿದೆ ಸಾಧಿಸಿರುವ ನೈಪುಣ್ಯತೆಗೆ ಸಾಕ್ಷಿ.

■ ವಿದ್ಯಾ ಎಚ್ ಹಾಲಭಾವಿ



ಥೇಟ್ ಕ್ಯಾಮರಾದಿಂದ ಕ್ಲಿಕ್ಕಿಸಿದ ಫೋಟೋದಂತೆ ಕಾಣಿಸುವ ಈ ಚಿತ್ರಗಳು ನ್ಯೂಯಾರ್ಕ್‌ನ ಅಲೈಸಾ ಮಾಂಕ್ಸ್ ಎನ್ನುವ ಖ್ಯಾತ ಕಲಾವಿದೆಯ ಕುಂಚದಿಂದ ಮೂಡಿ ಬಂದ ಅಮೋಘ ಕಲಾಕೃತಿಗಳು.

ಆರ್ಟ್ ಸ್ಕೂಲ್ ಅಫ್ ಫ್ಲಾರೆನ್ಸ್, ಬೋಸ್ಟನ್ ಕಾಲೇಜ್, ನ್ಯೂಯಾರ್ಕ್ ಅಕಾಡೆಮಿ ಆಫ್ ಆರ್ಟ್‌ಗಳಲ್ಲಿ ವಿದ್ಯಾಭ್ಯಾಸ ಮಾಡಿರುವ ಈಕೆ ಕುಂಚ ಹಿಡಿಯಲು ಆರಂಭಿಸಿದ್ದು 14ನೇ ವಯಸ್ಸಿನಲ್ಲಿ. ಮೊದಮೊದಲು ತನ್ನದೇ ಭಾವಚಿತ್ರಗಳನ್ನು ರಚಿಸಿ, ನಂತರ ತನ್ನ ಕುಟುಂಬದವರನ್ನು ರೂಪದರ್ಶಿಗಳನ್ನಾಗಿಸಿಕೊಂಡು ಬಣ್ಣದಲ್ಲಿ ಚಿತ್ರ ಮೂಡಿಸಲು ಆರಂಭಿಸಿದಳಂತೆ.

(10ನೇ ಪುಟ ನೋಡಿ)